# ಪರಮ್ ವಿಜ್ಞಾನ ಪತ್ರಿಕೆ

## ಪ್ರಶಸ್ತಿಗಳ ಆವೃತ್ತಿ

## ಗಡಿಗಳನ್ನು ಮೀರಿ

### ರೆಕ್ಕೆಗಳಿಂದ ಗರಿಗಳವರೆಗೆ ಪ್ರಾಣಿ ಸಂಕುಲದ ಅದ್ಭುತಗಳು

"ಪ್ರತಿಯೊಂದು ಜಾತಿಯೂ ಒಂದು ಮೇರುಕೃತಿಯು , ಪ್ರತಿ ಕೃತಿಯನ್ನು ಅತಿ ಕಾಳಜಿ ಹಾಗು ಬುದ್ದಿವಂತಿಕೆಯಿಂದ ಸೃಷ್ಟಿಸಲಾಗಿದೆ."

— ಇ. ಒ . ವಿಲ್ಸನ್

### ಆಗಸ್ಟ್ ಜನ್ಮದಿನಗಳು

- ಪ್ರಫುಲ್ಲ ಚಂದ್ರ ರೇ ► 2 ಆಗಸ್ಟ್ 1861
- ಎಂ ಎಸ್ ಸ್ವಾಮಿನಾಥನ್ ► 7 ಆಗಸ್ಟ್ 1925
- ಪಾಲ್ ಡಿರಾಕ್ ► 8 ಆಗಸ್ಟ್ 1902
- ವಿಕ್ರಮ್ ಸಾರಾಭಾಯ್ ► 12 ಆಗಸ್ಟ್ 1919
- ಗೇಬ್ರಿಯಲ್ ಲಿಪ್ಮನ್ ► 16 ಆಗಸ್ಟ್ 1845
- ಲುಕ್ ಮಾಂಟಾಗ್ನಿಯರ್ ► 18 ಆಗಸ್ಟ್ 1932

# ಮುನ್ನುಡಿ

ಮೊಟ್ಟ ಮೊದಲ ಗಡಿಗಳ ಮೀರಿದ ಪರಮ್ ಪ್ರಶಸ್ತಿಗಳ ಪತ್ರಿಕೆಯೊಳಗೆ ಧುಮುಕೋಣ! ಅಸಾಧಾರಣ ಜೀವಿಗಳ ಜಗತ್ತಿನೊಳಗೆ, ೨೦ ಮನಸೆಳೆಯುವ ಪುಟಗಳ ಮೂಲಕ ರೋಮಾಂಚನಕಾರಿಯಾದ ಪ್ರಯಾಣಕ್ಕೆ ಸಿದ್ದರಾಗಿ.

ವಾಯು ಭೂಮಿ ನೀರು


ಇಂದ ಅತ್ಯಂತ ಅಪರೂಪದ ಪ್ರಾಣಿಗಳನ್ನು ನಾವು ಆಯ್ಕೆ ಮಾಡಿದ್ದೇವೆ. ಅಸಾಧಾರಣ ಕೌಶಲ್ಯಗಳು ಹಾಗು ರೂಪಾಂತರಗಳಿರುವ ೧೬ ಪ್ರಾಣಿಗಳನ್ನು ಪರಿಚಯಿಸಿಕೊಳ್ಳಲು ನೀವು ನಮ್ಮ ಜೊತೆಗೂಡಿ. ನಮ್ಮ ರೋಮಾಂಚಕ ಫೋಟೋಗಳು ಮತ್ತು ಆಕರ್ಷಕ ಸಂಗತಿಗಳು ಈ ಅಸಾಧಾರಣ ಪ್ರಾಣಿ ಪ್ರಭೇದಗಳ ನಂಬಲಾಗದ ಜೀವನದಲ್ಲಿ ನಿಮ್ಮನ್ನು ಮುಳುಗಿಸುತ್ತವೆ. ನಮ್ಮ ಪ್ರಪಂಚದ ಅತಿ ವಿಸ್ಮಯ ಹಾಗು ಸ್ಫೂರ್ತಿದಾಯಕ ಜೀವಿಗಳ ವನ್ಯ ಆಚರಣೆಗೆ ಸಿದ್ಧರಾಗಿ, ಬೆರಗು ಹಾಗು ಆಶ್ಚರ್ಯಗಳ ಹೊಳೆಯಲ್ಲಿ ಮುಳುಗಲು ತಯಾರಾಗಿ!

## ಗೌರವಾನ್ವಿತ ಉಲ್ಲೇಖ

**ಕೆಂಪು ಪಾಂಡಾ,**

ಮುದ್ದುತನದ ಸರದಾರ ! ಅದರ ಉಣ್ಣೆಯಂತಿರುವ ಕೆಂಪು ತುಪ್ಪಳ, ಮನಸೂರೆಗೊಳಿಸುವ ಮುಖ ಮತ್ತು ವಿನೋದದ ಅಂತರಂಗದಿಂದ ಪ್ರಕೃತಿಯ ಮುದ್ದು ಪ್ರೇಮಿಯಾಗಿ ಆಳ್ವಿಕೆ ಮಾಡುತ್ತದೆ.





**ಹೈಡ್ರಾ**

ಶಾಶ್ವತ ತಾರುಣ್ಯದ ರಾಕ್ ಸ್ಟಾರ್! ಅವು ಆಟದಲ್ಲೇ ಜೀವನ ಚಕ್ರವನ್ನು ಹಿಂದಕ್ಕೆ ಉರುಳಿಸಿ, ಅಮರತ್ವ ಹಾಗು ಅಂತ್ಯವಿಲ್ಲದ ಸಾಧ್ಯತೆಗಳಿಂದ ನಲಿಯುತ್ತವೆ.!

# ಗೌರವಾನ್ವಿತ ಉಲ್ಲೇಖ

ಸಾಗರಲೋಕದ ಮನಸೆಳೆಯುವ ಗಂಧರ್ವ ........ 3
ಭೂಲೋಕದ ನಿಪುಣ ಛದ್ಮವೇಷಗಾರ ........ 4
ಕಲಿಯುಗದ ಮರುಸೃಷ್ಟಿಯ ರಾವಣ ........ 5
ಪ್ರಕೃತಿಯ ಕಲಾತ್ಮಕ ಸಮ್ಮಿಲನಕಾರ ........ 6
ಸಾಗರಲೋಕದ ಬಣ್ಣಗಳ ಬೆಸ್ತ ........ 7
ಸಮುದ್ರದಾಳದ ಮುದ್ದು ಚಿನ್ನಾರಿಗಳು ........ 8
ಕಲಿಯುಗದ ಕವಚಧಾರಿ ಕರ್ಣ ........ 9
ಕಲಿಯುಗದ ಚತುರ್ಹೃದಯ ಸಹೃದಯಿ ........ 10
ಮರಳುಗಾಡಿನ ಶಿರ ಮಾಂತ್ರಿಕ ........ 11
ಕೀಟಲೋಕದ ಜೀವಂತ ಬಾಣ ........ 12
ಭೂಲೋಕದ ಮಲದ ಶಿಲ್ಪಕಾರ ........ 13
ಆಗಸದ ಜೀವಂತ ವಿಮಾನ ........ 14
ಭೂಲೋಕದ ಪಾರದರ್ಶಕತೆಯ ಜಾದೂಗಾರ ........ 15
ಬಾನಿನ ದಣಿಯದ ಕಣ್ಮಣಿ ........ 16
ಪ್ರಾಣಿಲೋಕದ ಬೆಳ್ಳಿ ಕವಚಧಾರಿ ........ 17
ಕೀಟಲೋಕದ ಕುಟುಕುವ ಮಗು ........ 18

# ಸಾಗರಲೋಕದ ಮನಸೆಳೆಯುವ ಗಂಧರ್ವ
# ರೆಡ್ - ಲಿಪ್ಡ್ ಬ್ಯಾಟ್ ಫಿಶ್







**ರೆಡ್-ಲಿಪ್ಡ್ ಬ್ಯಾಟ್ ಫಿಶ್** ಈಜಲು ಸೋಮಾರಿಯಾದರೇನು? ಸಾಗರದ ತಳದಲ್ಲಿ **ರೆಕ್ಕೆಗಳಲ್ಲೇ ನಡೆಯುತ್ತಾ, ಕೆಂಬಣ್ಣದ ತುಟಿಗಲ್ಲಿ** ಸಂಗಾತಿಗಳನ್ನೂ, ಬೇಟೆಯನ್ನೂ ಸೆಳೆಯುವ ಸೌಂದರ್ಯದ ರೂಪಕ!


## ವೈಶಿಷ್ಟ್ಯಗಳ ಕಿಂಡಿ

**೧೦** ಮೀ ವೇಗದಲ್ಲಿ
ಓಡೋ ಓಟಗಾರರು

## ಭೂಲೋಕದ ನಿಪುಣ ಛದ್ಮವೇಷಗಾರ

# ಸಟಾನಿಕ್ ಲೀಫ್ -ಟೈಲ್ಡ್ ಗೆಸಿಕೊ





**ಸಟಾನಿಕ್ ಲೀಫ್-ಟೈಲ್ಡ್ ಗೆಸಿಕೊಗೆ** ಶತ್ರುಗಳ ಭಯವೇಕೆ? **ಎಲೆಯಂತಹ ಚಪ್ಪಟೆ ಬಾಲ**, **ತೊಗಟೆಯಂತಹ ಚರ್ಮವ** ಧರಿಸಿ, ಗಿಡದಲ್ಲಿ ಕುಳಿತು ತಾನೊಂದು ಎಲೆಯಂತೆ ನಟಿಸುವ ಮಾಯಗಾರ!

## ವೈಶಿಷ್ಟ್ಯಗಳ ಕಿಂಡಿ


**೯೭** ಇಂದ **೧೬೯**
ಹಲ್ಲುಗಳಿರುವ ದವಡೆಯೇ
ಅವರ ಶಸ್ತ್ರ





# ಕಲಿಯುಗದ ಮರುಸೃಷ್ಟಿಯ ರಾವಣ

# ಅಸ್ಕೊವ್ಲೀಟ್



**ಅಸ್ಕೊವ್ಲೀಟ್ಲ್(ನೀರುಗೌಳಿ)ಗೆ** ಸಾವಿನ ಚಿಂತೆಯೇಕೆ? **ಕೈ ಕಾಲುಗಳು** ತುಂಡಾದರೂ **ಮತ್ತೆ ಬೆಳೆಸಿಕೊಳ್ಳುವ** ಮಾಯಾವಿ.





## ವೈಶಿಷ್ಟ್ಯಗಳ ಕಿಂಡಿ

**೧೦ ಮೀ** ವೇಗದಲ್ಲಿ ಈಜೋ ಈಜುಗಾರರು

# ಪ್ರಕೃತಿಯ ಕಲಾತ್ಮಕ ಸಮ್ಮಿಲನಕಾರ

# ಒಕಾಪಿ





**ಒಕಾಪಿಗೆ** ಪ್ರತ್ಯೇಕತೆಯ ಚಿಂತೆ ಏಕೆ? **ಜಿರಾಫೆಯ ಕಂದು ಅಂಗಿಯ** ಧರಿಸಿ, **ಜೀಬ್ರಾದ ಬಿಳಿ ಪಟ್ಟಿಗಳು ಮತ್ತು ಉಂಗುರಗಳೊಂದಿಗೆ** ಮರೆಯುವ ಕಲಾಕಾರ


## ವೈಶಿಷ್ಟ್ಯಗಳ ಕಿಂಡಿ

**೧೯೦೧ರವರೆಗೆ** ರಹಸ್ಯದಲ್ಲಿ ಉಳಿದ ಅಪರೂಪದ ಫ್ಯಾಷನ್ ಮಾದರಿಗಳು

# ಸಾಗರಲೋಕದ ಬಣ್ಣಗಳ ಬೆಸ್ತ

# ಮಾಂಟಿಸ್ ಶ್ರಿಂಪ್





**ಮಾಂಟಿಸ್ ಶ್ರಿಂಪ್**(**ಮಿಡತೆ ಸೀಗಡಿ**) **ಗೆ** ಬಣ್ಣಗಳ ಕುಂಚವೇಕೆ? ಮನುಜ ಕನಸಲ್ಲೂ ಕಾಣದ ಬಣ್ಣಗಳನ್ನು **ಕಂಗಳ ಪತ್ತೆಕಾರಕಗಳಲ್ಲಿ** ಸೆರೆಹಿಡಿಯುವ ಚತುರ.

## ವೈಶಿಷ್ಟ್ಯಗಳ ಕಿಂಡಿ


ಕಂಗಳಲ್ಲಿ ಬಣ್ಣ ಗ್ರಹಿಸುವ **೧೬** ಕೋನ್ ಕೋಶಗಳನ್ನೂ ಹೊಂದಿರುವ ದೃಷ್ಟಿಯ ಸೂಪರ್ ಸ್ಟಾರ್ಗಳು



## ಸಮುದ್ರದಾಳದ ಮುದ್ದು ಚಿನ್ನಾರಿಗಳು

# ಡಂಬೊ ಆಕ್ಟೋಪಸ್

**ಡಂಬೊ ಆಕ್ಟೋಪಸ್** ಗಿಂತ ಚೆಂದ ಯಾವುದು? **ಡಿಸ್ನಿ ಡಂಬೊ ಆನೆಯ ಕಿವಿಯನ್ನೇ ರೆಕ್ಕೆಗಳನ್ನಾಗಿ** ಪಡೆದು, **ಛತ್ರಿಯಂತಹ ಆಕಾರದಲ್ಲಿ** ಎಲ್ಲರನ್ನು ಸೆಳೆಯುವ ಒಲವಿನ ಮುದ್ದುಗಳು.




## ವೈಶಿಷ್ಟ್ಯಗಳ ಕಿಂಡಿ

**೩** ಹೃದಯಗಳನ್ನು ಹೊಂದಿರುವ ನಾಚಿಕೆಯ ಸರದಾರರು

# ಕಲಿಯುಗದ ಕವಚಧಾರಿ ಕರ್ಣ

# ಪಾಂಗೊಲಿನ್



**ಪಾಂಗೊಲಿನ್ಗೆ** ಇರಿತಗಳ ದಿಗಿಲೇಕೆ? ತನ್ನನ್ನೇ ಕಬಳಿಸಲು ಬರುವ ಮೃಗಗಳನ್ನು **ಚಿಪ್ಪಿನ ಮೈ ಪದರದಲ್ಲೇ** ಓಡಿಸುವ ವೀರ ಸೈನಿಕ.

## ವೈಶಿಷ್ಟ್ಯಗಳ ಕಿಂಡಿ

ಪ್ಯಾಂಗೊಲಿನ್‌ನ ಮಾಪಕವು ಅದರ ದೇಹದ ತೂಕದ **20%** ವರೆಗೆ ಆವರಿಸುತ್ತದೆ, ಇದು ಅತ್ಯುತ್ತಮ ರಕ್ಷಣೆ ಕೂಡ ನೀಡುತ್ತದೆ

# ಕಲಿಯುಗದ ಚತುರ್ಹೃದಯ ಸಹೃದಯಿ

# ಹ್ಯಾಗ್ಫಿಶ್

**ಹ್ಯಾಗ್ಫಿಶ್ ಗೆ** ಹೃದಯಗಳ ವಿಷಯವೇಕೆ? ಯಾರನ್ನೂ ಸೆಳೆಯದ ರೂಪದ **ಒಳಗೆ ನಾಲ್ಕು ಹೃದಯಗಳ** ಅಡಗಿಸಿಕೊಂಡಿರುವ ವಿಶಿಷ್ಟ ಹೃದಯರಕ್ತನಾಳದ ಹೃದಯವಂತ .


## ವೈಶಿಷ್ಟ್ಯಗಳ ಕಿಂಡಿ

ನಿಮಿಷದಲ್ಲಿ **ಗ್ಯಾಲನ್** ಬಕೆಟ್ ಅನ್ನು ತಮ್ಮ ಲೋಳೆರಸದಿಂದ ತುಂಬಬಲ್ಲ ನಿಪುಣರು.



# ಮರಳುಗಾಡಿನ ಶಿರ ಮಾಂತ್ರಿಕ

# ತೋರ್ನೀ ಡೆವಿಲ್





**ತೋರ್ನೀ ಡೆವಿಲ್ ಗೆ** ವೈರಿಗಳ ಅಂಜಿಕೆಯೇಕೆ? **ಬಾಲದಲ್ಲೇ ನಕಲಿ ತಲೆಯನ್ನು** ತೋರಿಸಿ ವೈರಿಗಳನ್ನು ಭ್ರಮೆಗೊಳಿಸುವ ತಂಟೆಕೋರ.




## ವೈಶಿಷ್ಟ್ಯಗಳ ಕಿಂಡಿ

ಇರದ **ಎರಡನೇ** ತಲೆಯನ್ನು ತೋರಿ ತಬ್ಬಿಬ್ಬಾಗಿಸುವ ತುಂಟರು



## ಕೀಟಲೋಕದ ಜೀವಂತ ಬಾಣ

# ಪಾಂಡ ಇರುವೆ



**ಪಾಂಡ ಇರುವೆಗೆ** ಒಳ್ಳೆಯತನದ ಭಾವವೇಕೆ? **ಕುಟುಕುತ್ತಲೇ ಹಸುವಿನ ಕೊಲೆಗಾರನೆಂಬ** ಹಣೆಪಟ್ಟಿಯೊಂದಿಗೆ, **ಗೂಡುಗಳ ಅಪಹರಿಸುವ ಅಪಹರಣಕಾರ**.


## ವೈಶಿಷ್ಟ್ಯಗಳ ಕಿಂಡಿ

**ಒಂದು ಡಜನ್** ಬಾರಿ
ಕುಟುಕಿ ಹಸುಗಳನ್ನೂ
ಉರುಳಿಸಬಲ್ಲ ವೀರರು



# ಭೂಲೋಕದ ಮಲದ ಶಿಲ್ಪಕಾರ

# ಒಮ್ಬ್ಯಾಟ್



**ಒಮ್ಬ್ಯಾಟ್ ಗೆ** ರೇಖಾಗಣಿತದ ಪಾಠವೇಕೆ? ಸ್ನಾಯುವಿನ ಒಣಗಿಸುವ ಹಾಗು ಸಂಕೋಚನಗಳಿಂದ **ಘನ ರೂಪದ ಮಲವನ್ನು** ವಿಸರ್ಜಿಸುವ ಪ್ರಕೃತಿಯ ಕೆತ್ತನೆಕಾರ.



## ವೈಶಿಷ್ಟ್ಯಗಳ ಕಿಂಡಿ

**೧೬** ದಿನಗಳಲ್ಲಿ ತಮ್ಮ ಊಟವನ್ನು ಜೀರ್ಣಿಸಿಕೊಳ್ಳುವ ಸಾವಧಾನಿಗಳು

## ಆಗಸದ ಜೀವಂತ ವಿಮಾನ



# ಪೆರೆಗ್ರಿನ್ ಫಾಲ್ಕನ್

**ಪೆರೆಗ್ರಿನ್ ಫಾಲ್ಕನ್ ಗೆ** ಸಾರಿಗೆಯ ಚಿಂತೆಯೇಕೆ? **೩೮೦ ಕಿ.ಮೀ** (**೨೪೦ ಮೀ**) ವೇಗದಲ್ಲಿ ಹಾರುವ ಆಗಸದ ಸರದಾರ.


## ವೈಶಿಷ್ಟ್ಯಗಳ ಕಿಂಡಿ

ಮಾನವ ದೃಷ್ಟಿಗಿಂತ **೮** ರಷ್ಟು ದೃಷ್ಟಿ ಹೊಂದಿರುವ ಪ್ರಕೃತಿಯ ವೀಕ್ಷಕ ಚತುರರು.



# ಭೂಲೋಕದ ಪಾರದರ್ಶಕತೆಯ ಜಾದೂಗಾರ

# ಗ್ಲಾಸ್ ಫ್ರಾಗ್



**ಗ್ಲಾಸ್ ಫ್ರಾಗ್ ಗೆ** ಸ್ಕ್ಯಾನಿಂಗ್ ನ ಖರ್ಚೇಕೆ? **ಪಾರದರ್ಶಕ ಚರ್ಮ ಮತ್ತು ಸ್ನಾಯುಗಳ** ಮೂಲಕ ಹೃದಯ, ಲಿವರ್ ಹಾಗು ಕರುಳಿನ ಸುರುಳಿಗಳು ತೋರುವ ಜೀವಂತ ಗಾಜುಗಳು.




## ವೈಶಿಷ್ಟ್ಯಗಳ ಕಿಂಡಿ

ಶೇಕಡಾ **೯0** ರಷ್ಟು ರಕ್ತ ಕಣಗಳನ್ನು ಬಚ್ಚಿಟ್ಟು, ಪಾರದರ್ಶಕವಾಗಿ ಮಲಗುವ ರಹಸ್ಯ ಪಾಲಕರು.



## ಬಾನಿನ ದಣಿಯದ ಕಣ್ಮಣಿ

# ಬಾರ್ - ಟೈಲ್ಡ್ ಗಾಡ್‌ವಿಟ್



**ಬಾರ್** - **ಟೈಲ್ಡ್ ಗಾಡ್‌ವಿಟ್ ಗೆ** ವಸತಿಗೃಹದ ಚಿಂತೆಯೇಕೆ ? **ಏಳು ದಿನಗಳಲ್ಲಿ 2000 ಮೈಲಿಗಳು** ವಿಶ್ರಾಂತಿ, ಊಟ, ತಿಂಡಿಗಳ ಚಿಂತೆ ಇಲ್ಲದೆ ಹಾರಿ ನ್ಯೂ ಜಿಲ್ಯಾಂಡ್ ಇಂದ ಅಲಾಸ್ಕಾ ಸೇರುವ ಮ್ಯಾರಥಾನ್ ವಿಜಯಿಗಳು.


## ವೈಶಿಷ್ಟ್ಯಗಳ ಕಿಂಡಿ

**೫000** ಮೀ ಎತ್ತರದಲ್ಲಿ ಹಾರುವ ವೀರ ಬಾನಾಡಿಗಳು



## ಪ್ರಾಣಿಲೋಕದ ಬೆಳ್ಳಿ ಕವಚಧಾರಿ

# ಹೊಂಡುರಾನ್ ಬಿಳಿ ಬ್ಯಾಟ್





**ಹೊಂಡುರಾನ್ ಬಿಳಿ ಬ್ಯಾಟ್ ಗೆ** ಫೇಸ್ ಕ್ರೀಮ್ನ ಹುಡುಕಾಟವೇಕೆ? ತಲೆಬುರುಡೆಯನ್ನು ಆವರಿಸಿರುವ **ಕವಚದಂತಹ ದಪ್ಪ ಕಪ್ಪು ಪೊರೆಯಲ್ಲೇ** ಸೂರ್ಯನ **ನೇರಳಾತೀತ ಬೆಳಕಿನ ಹಾನಿಯನ್ನು** ತಡೆಯುವ ಮುದ್ದುಗಳು.

## ವೈಶಿಷ್ಟ್ಯಗಳ ಕಿಂಡಿ

ಡೇರೆಗಳಲ್ಲಿ **ಒಂದು** ಗಂಡು, ೬ ಹೆಣ್ಣುಗಳನ್ನು ಆಳುವ ಸಾಮ್ರಾಟರು



## ಕೀಟಲೋಕದ ಕುಟುಕುವ ಮಗು

# ಉಂಬೊನಿಯ ಸ್ಪಿನೋಸ



**ಉಂಬೊನಿಯ ಸ್ಪಿನೋಸಗೆ** ತಾಯಿಯ ಎದೆಹಾಲೇಕೆ? ವಿಶಿಷ್ಟ ಕೊಕ್ಕಿನಲ್ಲಿ **ಮರದ ಕಂಡಗಳನ್ನು ಕುಟುಕಿ ಸಸ್ಯರಸವನ್ನು** ಹೀರಿ ಬದುಕುವ **ಎಲೆ ವೇಷದಾರಿ**.



## ವೈಶಿಷ್ಟ್ಯಗಳ ಕಿಂಡಿ

**೨೫೦೦**ಕ್ಕೂ ಹೆಚ್ಚು ಜಾತಿಗಳಲ್ಲಿ ಮೆರೆಯುವ ರಾಜರು

# ನಮ್ಮ ಜೊತೆಗೂಡಿ !

ನಾವು ಪತ್ರಿಕೆಯನ್ನು ಮುಕ್ತವಾಗಿಡಲು ಬಯಸುತ್ತೇವೆ ಮತ್ತು ಜನರು ವಿಜ್ಞಾನವನ್ನು ಅನುಭವಿಸುವ ರೀತಿಯಲ್ಲಿ ಪ್ರಭಾವ ಬೀರಲು ಬಯಸುತ್ತೇವೆ.


ಪ್ರಾಯೋಜಕರು (ಪ್ರತಿ ಸಂಚಿಕೆಗೆ ₹ 1 ಲಕ್ಷ)

- 10 ಉತ್ತಮ ಗುಣಮಟ್ಟದ ಭೌತಿಕ ಪ್ರತಿಗಳನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತದೆ
- ನಿಮ್ಮ ಆಯ್ಕೆಯ ಒಂದು ಪುಟದ ಜಾಹೀರಾತು
- ಪ್ರಾಯೋಜಕರಿಂದ ವಿಜ್ಞಾನ ಸಮುದಾಯಕ್ಕೆ ಸಂದೇಶ
- ಬೆಂಗಳೂರು ಮತ್ತು ಸುತ್ತಮುತ್ತಲಿನ 20+ ಗ್ರಂಥಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಭೌತಿಕ ಪ್ರತಿಗಳು
- ಸಾರ್ವಜನಿಕ ವಲಯಗಳಲ್ಲಿ ಓದಲು ಶಾಶ್ವತವಾಗಿ ಉಚಿತ

ನಮ್ಮ ವೆಬ್‌ಸೈಟ್ ಮೂಲಕ ಬರುವ (₹2000 ವರೆಗೆ) ಎಲ್ಲಾ ದೇಣಿಗೆಗಳನ್ನು ಪ್ರಶಂಸಿಸಲಾಗುತ್ತದೆ

ನಮ್ಮನ್ನು ಸಂಪರ್ಕಿಸಿ
+91 84312 66867
collaboration@paraminnovation.org

ಇದೊಂದು ವಿಷಯಾಧಾರಿತ ಮಾಸಿಕ ಪತ್ರಿಕೆ. ಪ್ರತಿ ತಿಂಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತಾಗಿ ಹೊಸ ವಿಷಯವನ್ನು ಆಯ್ಕೆ ಮಾಡಿ ಪ್ರಸ್ತುತಪಡಿಸಲಾಗುತ್ತದೆ



ಪತ್ರಿಕೆಯಲ್ಲಿ ಪ್ರಕಟವಾಗಲು, ದಯವಿಟ್ಟು ನಿಮ್ಮ ಆಲೋಚನೆಗಳು, ಲೇಖನಗಳು ಮತ್ತು ಚಿತ್ರಗಳನ್ನು content@paraminnovation.org ಗೆ ಕಳುಹಿಸಿ